# ಕುವೆಂಪು ವಿಶ್ವವಿದ್ಯಾಲಯ

**ದಿನಾಂಕ:09-09-2024ರಂದು ಸೋಮವಾರ ಪೂರ್ವಾಹ್ನ 11.00 ಗಂಟೆಗೆ "ಶತಮಾನೋತ್ಸವ ಭವನದ ಮೂರನೇ ಮಹಡಿಯ ಸಿಂಡಿಕೇಟ್ ಸಭಾಂಗಣ" ಇಲ್ಲಿ ನಡೆದ "ವಿಶೇಷ ಸಿಂಡಿಕೇಟ್ ಸಭೆ"ಯ ನಡಾವಳಿಗಳು.**

**ಹಾಜರಾದ ಸದಸ್ಯರು:**

| | | |
|---|---|---|
| 1. | ಪ್ರೊ. ಶರತ್ ಅನಂತಮೂರ್ತಿ, ಕುಲಪತಿಗಳು | ಅಧ್ಯಕ್ಷರು |
| 2. | ಶ್ರೀ ಎ.ಎಲ್. ಮಂಜುನಾಥ್, ಕುಲಸಚಿವರು (ಎ.ಎಸ್.(ಜೂನಿಯರ್ ಟೈಮ್ ಸ್ಕೇಲ್) | ಸದಸ್ಯ ಕಾರ್ಯದರ್ಶಿಗಳು |
| 3. | ಪ್ರೊ. ಗೋಪಿನಾಥ್ ಎಸ್.ಎಂ., ಕುಲಸಚಿವರು (ಮೌಲ್ಯಮಾಪನ) | ಸದಸ್ಯರು |
| 4. | ಡಾ. ವಿಷ್ಣುಮೂರ್ತಿ ಕೆ.ಎ, ಕಾಲೇಜು ಶಿಕ್ಷಣ ಇಲಾಖೆಯ ಆಯುಕ್ತರ ಪ್ರತಿನಿಧಿ | ಸದಸ್ಯರು |
| 5. | ಶ್ರೀ ಶಾಂತಕುಮಾರ್ ಜಿ.ಎಸ್. | ಸದಸ್ಯರು |
| 6. | ಶ್ರೀ ಶಶಿಧರ್ ಬಿ.ಎನ್. | ಸದಸ್ಯರು |
| 7. | ಡಾ. ಸಣ್ಣಹನುಮಪ್ಪ ಜಿ, ಪ್ರಾಂಶುಪಾಲರು | ಸದಸ್ಯರು |
| 8. | ಡಾ. ಅನಂತ ಎಸ್ ಪ್ರಾಂಶುಪಾಲರು | ಸದಸ್ಯರು |
| 9. | ಡಾ. ಅರುಣಾ ಎ. ಪ್ರಾಂಶುಪಾಲರು | ಸದಸ್ಯರು |
| 10. | ಶ್ರೀ ಶಿವಕುಮಾರ್ ಎಂ. | ಸದಸ್ಯರು |
| 11. | ಶ್ರೀ ಲಕ್ಷ್ಮೀಕಾಂತ ಚಿಮನೂರು | ಸದಸ್ಯರು |
| 12. | ಶ್ರೀಮತಿ ಸಾಕಮ್ಮ ಬಿ. | ಸದಸ್ಯರು |
| 13. | ಶ್ರೀ ಮುಸಾವೀರ್ ಬಾಷಾ, ಎಂ. | ಸದಸ್ಯರು |
| 14. | ಶ್ರೀ ಕೆ.ಪಿ. ಶ್ರೀಪಾಲ್ | ಸದಸ್ಯರು |
| 15. | ಶ್ರೀ ಹೆಚ್.ಜಿ. ಅರವಿಂದ | ಸದಸ್ಯರು |

**ಪೂರ್ವಾನುಮತಿಯೊಂದಿಗೆ ಗೈರುಹಾಜರಾದ ಸದಸ್ಯರು:**

| | | |
|---|---|---|
| 1. | ಪ್ರೊ. ಎನ್.ವಿ. ಕೃಷ್ಣಮೂರ್ತಿ, ಡೀನರು, ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯ | ಸದಸ್ಯರು |

**ಗೈರುಹಾಜರಾದ ಸದಸ್ಯರು:**

| | | |
|---|---|---|
| 2. | ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು. | ಸದಸ್ಯರು |
| 3. | ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ, ಬೆಂಗಳೂರು. | ಸದಸ್ಯರು |
| 4. | ನಿರ್ದೇಶಕರು, ಪದವಿಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು. | ಸದಸ್ಯರು |
| 5. | ಆಯುಕ್ತರು, ಸಾರ್ವಜನಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು.. | ಸದಸ್ಯರು |

**ಪ್ರಸ್ತಾವನೆ:** ಪ್ರಾರಂಭದಲ್ಲಿ 391ನೇ ವಿಶೇಷ ಸಿಂಡಿಕೇಟ್ ಸಭೆಗೆ ಆಗಮಿಸಿದ ಸದಸ್ಯರುಗಳೆಲ್ಲರಿಗೂ ಮಾನ್ಯ ಕುಲಸಚಿವರು ಆತ್ಮೀಯವಾಗಿ ಸ್ವಾಗತ ಕೋರಿದರು. ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಕಾಯ್ದೆ-2000, ಪ್ರಕರಣ 28(1)(ಜಿ), 38(1) ಹಾಗೂ 39(1)ರ ಪ್ರಕಾರ ವಿಶ್ವವಿದ್ಯಾಲಯದ ಸಿಂಡಿಕೇಟ್‌ಗೆ ಕರ್ನಾಟಕ ಸರ್ಕಾರದಿಂದ ನಾಮನಿರ್ದೇಶಿತ ಸದಸ್ಯರುಗಳಾದ ಶ್ರೀ ಶಿವಕುಮಾರ್ ಎಂ., ಶ್ರೀ ಲಕ್ಷ್ಮೀಕಾಂತ ಚಿಮನೂರು, ಶ್ರೀಮತಿ ಸಾಕಮ್ಮ ಬಿ., ಶ್ರೀ ಮುಸಾವೀರ್ ಬಾಷಾ, ಬಿ., ಶ್ರೀ ಕೆ.ಪಿ.ಶ್ರೀಪಾಲ್ ಹಾಗೂ ಶ್ರೀ ಹೆಚ್.ಜಿ. ಅರವಿಂದ ಇವರುಗಳನ್ನು ಆತ್ಮೀಯವಾಗಿ ಅಭಿನಂದಿಸಿ ಸನ್ಮಾನಿಸಲಾಯಿತು. ಎಲ್ಲಾ ಸದಸ್ಯರು ಸಭೆಗೆ ಪರಸ್ಪರ ಪರಿಚಯ ಮಾಡಿಕೊಂಡರು.

ಮಾನ್ಯ ಕುಲಪತಿಯವರು ಪ್ರಾಸ್ತಾವಿಕವಾಗಿ ಮಾತನಾಡಿ, ಕರ್ನಾಟಕ ಸರ್ಕಾರವು ಉತ್ತಮ ಶೈಕ್ಷಣಿಕ ಹಿನ್ನೆಲೆ ಹಾಗೂ ಅರ್ಹತೆ ಇರುವ ಸದಸ್ಯರನ್ನು ಸಿಂಡಿಕೇಟ್‌ಗೆ ನಾಮನಿರ್ದೇಶನ ಮಾಡಿದೆ. ತಾವೆಲ್ಲರೂ ಸಾಮಾಜಿಕ ಕಳಕಳಿ ಉಳ್ಳವರಾಗಿದ್ದೀರಿ. ತಮ್ಮ ಅತ್ಯಮೂಲ್ಯವಾದ ಸಲಹೆ ಮತ್ತು ಸೂಚನೆಗಳನ್ನು ನೀಡುವುದರ ಮೂಲಕ ವಿಶ್ವವಿದ್ಯಾಲಯದ ಶೈಕ್ಷಣಿಕ ಹಾಗೂ ಸಂಶೋಧನಾ ಅಭಿವೃದ್ಧಿಗೆ ಸಹಕರಿಸುವಂತೆ ಕೋರಿದರು. ಮುಂದುವರೆದು ಮಾತನಾಡಿದ ಮಾನ್ಯ ಕುಲಪತಿಯವರು ವಿಶ್ವವಿದ್ಯಾಲಯಕ್ಕೆ ನ್ಯಾಕ್ ಪೀರ್



ಕುಲಸಚಿವರು 19/10/24
ಕುವೆಂಪು ವಿಶ್ವವಿದ್ಯಾಲಯ

ಸಮಿತಿ ಭೇಟಿ ನೀಡುತ್ತಿರುವ ಹಿನ್ನೆಲೆಯಲ್ಲಿ ಅಗತ್ಯ ಮೂಲಭೂತ ಸೌಲಭ್ಯಗಳಿಗಾಗಿ ವಿಶ್ವವಿದ್ಯಾಲಯಕ್ಕೆ ವಿಶೇಷ ಅನುದಾನ ಒದಗಿಸುವಂತೆ ಕೋರಿ ಸನ್ಮಾನ್ಯ ಮುಖ್ಯಮಂತ್ರಿಗಳು, ಉನ್ನತ ಶಿಕ್ಷಣ ಸಚಿವರಿಗೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದ್ದು, ಅನುದಾನ ಬಿಡುಗಡೆಯಾಗುವ ಆಶಾಭಾವನೆ ಇದೆ. ಮುಂದುವರೆದು, ವಿಶ್ವವಿದ್ಯಾಲಯದ ಅಧ್ಯಾಪಕ ಮತ್ತು ಅಧ್ಯಾಪಕೇತರ ನೌಕರರು ಹಾಗೂ ವಿದ್ಯಾರ್ಥಿಗಳಿಗಾಗಿ ಕ್ರೀಡಾ ಮತ್ತು ಸಾಂಸ್ಕೃತಿಕ ಉತ್ಸವವನ್ನು ದಿನಾಂಕ: 26–09–2024 ರಿಂದ 28–09–2024ರವರೆಗೆ ಏರ್ಪಡಿಸಲಾಗಿದೆ. ಇದರಲ್ಲಿ ವಿದ್ಯಾರ್ಥಿಗಳು ಹಾಗೂ ಉದ್ಯೋಗಿಗಳಿಗಾಗಿ ಪ್ರತ್ಯೇಕವಾದ ಸ್ಪರ್ಧೆಗಳನ್ನು ನಡೆಸಲಾಗುವುದು. ದೈನಂದಿನ ಕೆಲಸ ಕಾರ್ಯಗಳು ಮತ್ತು ಪಾಠಪ್ರವಚನಗಳಲ್ಲಿ ನಿರತರಾಗಿರುವವರಿಗೆ ಒಂದು ಉತ್ತಮ ಬದಲಾವಣೆ ನೀಡುವುದು ಇದರ ಉದ್ದೇಶ ಎಂದರು. ಸದಸ್ಯರಾದ ಶ್ರೀ ಮುಸಾವೀರ್ ಬಾಷಾ ಎಂ. ರವರು ಮಾತನಾಡಿ 'ಡಿ' ಗ್ರೂಪ್ ನೌಕರರಿಗೂ ಇದರಲ್ಲಿ ಭಾಗವಹಿಸಲು ಅವಕಾಶ ನೀಡುವಂತೆ ಕೋರಿದರು. ಮಾನ್ಯ ಕುಲಪತಿಯವರು ಮಾಹಿತಿ ನೀಡುತ್ತಾ ಸ್ವೀಪರ್‌ಯಿಂದ ಕುಲಪತಿಯವರೆಗೆ ಎಲ್ಲರಿಗೂ ಇದರಲ್ಲಿ ಭಾಗವಹಿಸಲು ಮುಕ್ತ ಅವಕಾಶವಿದೆ. ಮನರಂಜನೆಯ ಜೊತೆಗೆ ಒಬ್ಬರನ್ನೊಬ್ಬರು ಅರಿತು ಬೆರೆಯಲು ಇದು ಸಹಕಾರಿಯಾಗುತ್ತದೆ ಎಂದರು. ನಂತರ ಕಾರ್ಯಸೂಚಿಯ ಪ್ರಕಾರ ವಿಷಯಗಳನ್ನು ಚರ್ಚೆಗೆ ಕೈಗೆತ್ತಿಕೊಳ್ಳಲಾಯಿತು.

## ಪರೀಕ್ಷಾ ವಿಭಾಗ

**2024–ಸಿಂ–4.01:** 34ನೇ ಘಟಿಕೋತ್ಸವದ ಪೂರ್ವಸಿದ್ಧತಾ ಕಾರ್ಯಗಳನ್ನು "Event Management System" ನವರಿಗೆ ವಹಿಸಿಕೊಡುವ ಕುರಿತು.

**ಚರ್ಚೆ:** ಕುಲಸಚಿವ (ಮೌಲ್ಯಮಾಪನ)ರವರು ವಿಷಯ ಮಂಡಿಸಿ ಮಾತನಾಡುತ್ತಾ, ವಿಶ್ವವಿದ್ಯಾಲಯದ 34ನೇ ವಾರ್ಷಿಕ ಘಟಿಕೋತ್ಸವವನ್ನು ಏರ್ಪಡಿಸಲು ಅನುಮತಿ ಕೋರಿ ಘನತೆವೆತ್ತ ಕುಲಾಧಿಪತಿಯವರಿಗೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಘಟಿಕೋತ್ಸವದಲ್ಲಿನ ಮೈಕ್‌ಸೆಟ್, ಲೈಟಿಂಗ್ಸ್, ಬ್ಯಾನರ್, ಕುರ್ಚಿಗಳು, ಸೋಫಾ, ಹೂವಿನ ಅಲಂಕಾರ, ಫೋಟೋ ವೀಡಿಯೋ, ಊಟೋಪಚಾರ ಸೇರಿದಂತೆ ಎಲ್ಲಾ ವ್ಯವಸ್ಥೆಗಳನ್ನು ಸರ್ಕಾರದಲ್ಲಿ ನೊಂದಾಯಿತ ಹಾಗೂ ಇ–ಟೆಂಡರ್ ಮೂಲಕ ಆಯ್ಕೆಯಾಗುವ "Event Management System" ಸಂಸ್ಥೆಯವರಿಗೆ ವಹಿಸಿಕೊಡಬಹುದಾಗಿದೆ. ಘಟಿಕೋತ್ಸವಕ್ಕೆ ಬಹಳಷ್ಟು ಮೊಬಲಗು ವೆಚ್ಚವಾಗುತ್ತಿದ್ದು, ಹಿಂದಿನ ವರ್ಷಗಳಲ್ಲಿ ಪ್ರತಿಯೊಂದಕ್ಕೂ ಕೊಟೇಷನ್ ಸಿಸ್ಟಂ ಅನುಸರಿಸಲಾಗಿತ್ತು. ಇದರಿಂದ, ಲೆಕ್ಕಪತ್ರ ಸಲ್ಲಿಸಲು ತೊಂದರೆಯಾಗುತ್ತಿತ್ತು ಮಾತ್ರವಲ್ಲದೇ ಆಡಿಟ್‌ನಲ್ಲಿ ಕೂಡ ಆಕ್ಷೇಪಣೆಗಳು ಆಗುತ್ತಿದ್ದವು. ಈ ಹಿನ್ನೆಲೆಯಲ್ಲಿ, ಘಟಿಕೋತ್ಸವದ ಪೂರ್ವಸಿದ್ಧತಾ ಕಾರ್ಯಗಳನ್ನು "Event Management System" ನವರಿಗೆ ವಹಿಸಿಕೊಡಲು ಇ–ಟೆಂಡರ್ ಪ್ರಕ್ರಿಯೆ ಕೈಗೊಳ್ಳುವ ಕುರಿತು ಸಭೆಯ ಅನುಮೋದನೆಗಾಗಿ ಮಂಡಿಸಲಾಗಿದೆ ಎಂದರು.

ಶ್ರೀ ಕೆ.ಪಿ. ಶ್ರೀಪಾಲ್‌ರವರು ಮಾತನಾಡಿ, ಈವೆಂಟ್ ಮ್ಯಾನೇಜ್‌ಮೆಂಟ್ ಸಂಸ್ಥೆಗಳು ಹಲವಾರು ಸಂದರ್ಭಗಳಲ್ಲಿ ಗುಣಮಟ್ಟ ಕಾಯ್ದುಕೊಂಡಿಲ್ಲ. ಅವರ ಗುಣಮಟ್ಟದ ಬಗ್ಗೆ ಬಹಳಷ್ಟು ದೂರುಗಳಿವೆ. ಆದುದರಿಂದ, ಈ ಕುರಿತು ಪರಿಶೀಲಿಸುವುದು ಒಳಿತು ಎಂದರು. ಶ್ರೀ ಮುಸಾವೀರ್ ಬಾಷಾರವರು ಮಾತನಾಡಿ, ಸಂಸ್ಥೆಯವರು ಟೆಂಡರ್ ಪಡೆಯಬೇಕೆಂಬ ಉದ್ದೇಶದಿಂದ ಟೆಂಡರ್‌ನಲ್ಲಿ ಕಡಿಮೆ ದರ ನಮೂದಿಸಿ, ಸೇವೆಯಲ್ಲಿ ಗುಣಮಟ್ಟ ಕಾಯ್ದುಕೊಳ್ಳುವುದಿಲ್ಲ ಎಂದರು. ಕುಲಸಚಿವ(ಮೌಲ್ಯಮಾಪನ)ರವರು ಮಾತನಾಡಿ, ದಾವಣಗೆರೆ ವಿಶ್ವವಿದ್ಯಾಲಯದ ಘಟಿಕೋತ್ಸವ ಕಾರ್ಯಕ್ರಮವನ್ನು ಈವೆಂಟ್ ಮ್ಯಾನೇಜ್‌ಮೆಂಟ್ ಸಂಸ್ಥೆಯವರು ಅತ್ಯುತ್ತಮವಾಗಿ ನಿರ್ವಹಿಸಿದ್ದಾರೆ ಎಂದರು. ಕುಲಸಚಿವರು ಮಾತನಾಡಿ, ಟೆಂಡರ್‌ನಲ್ಲಿ ಬಿಗಿಯಾದ ನಿಬಂಧನೆಗಳನ್ನು ನಮೂದಿಸಲಾಗುವುದು. ಅವರು ಈ ಹಿಂದೆ ನೀಡಿರುವ ಸೇವೆಗಳನ್ನು ತೃಪ್ತಿಕರವಾಗಿ ಒದಗಿಸಿರುವ ಬಗ್ಗೆ ಸಂಬಂಧಪಟ್ಟವರಿಂದ ಪಡೆದ ದೃಢೀಕರಣ ಪತ್ರಗಳನ್ನು ಲಗತ್ತಿಸಬೇಕಾಗುತ್ತದೆ. ಇದನ್ನು ಟೆಕ್ನಿಕಲ್ ಬಿಡ್‌ನಲ್ಲಿ ಸಮಗ್ರವಾಗಿ ಪರಿಶೀಲಿಸಲಾಗುವುದು ಎಂದರು. ಮಾನ್ಯ ಕುಲಪತಿಯವರು ಮಾತನಾಡಿ, ಬೇರೆ ಬೇರೆ ವಿಶ್ವವಿದ್ಯಾಲಯ/ಶೈಕ್ಷಣಿಕ ಸಂಸ್ಥೆಗಳಲ್ಲಿ ಘಟಿಕೋತ್ಸವ ಕಾರ್ಯವನ್ನು ತೃಪ್ತಿಕರವಾಗಿ

9/10/24
ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451

ನಿರ್ವಹಿಸಿರುವ ಬಗ್ಗೆ ಟೆಂಡರ್‌ನ Terms and Conditions ನಲ್ಲಿ ನಮೂದಿಸಲಾಗುವುದು ಎಂದರು.

**ನಿರ್ಣಯ:** ಸುದೀರ್ಘ ಚರ್ಚೆಯ ನಂತರ ವಿಶ್ವವಿದ್ಯಾಲಯದ 34ನೇ ವಾರ್ಷಿಕ ಘಟಿಕೋತ್ಸವದ ಕೆಲಸ ಕಾರ್ಯಗಳನ್ನು ಸರ್ಕಾರದಲ್ಲಿ ನೊಂದಾಯಿತ ಹಾಗೂ ಇ-ಟೆಂಡರ್ ಮೂಲಕ ಆಯ್ಕೆಯಾಗುವ "Event Management System" ಸಂಸ್ಥೆಯವರಿಗೆ ವಹಿಸಿಕೊಡಲು ಸಭೆಯು ಅನುಮೋದಿಸಿತು.

**2024–ಸಿಂ–4.02:** ಪರೀಕ್ಷಾ ವಿಭಾಗದಲ್ಲಿ ಇರುವಂತಹ ನಿಗದಿತ ಅವಧಿ ಮುಗಿದ ಮೌಲ್ಯಮಾಪನಗೊಂಡ ಉತ್ತರ ಪತ್ರಿಕೆಗಳು ಹಾಗೂ ಇತರೆ ಅನುಪಯುಕ್ತ ಕಾಗದ ಪತ್ರಗಳ ವಿಲೇವಾರಿ ಮಾಡುವ ಬಗ್ಗೆ.

**ಚರ್ಚೆ:** ಕುಲಸಚಿವ (ಮೌಲ್ಯಮಾಪನ)ರವರು ವಿಷಯ ಮಂಡಿಸಿ ಮಾತನಾಡುತ್ತಾ, ಪರೀಕ್ಷಾ ಮೌಲ್ಯಮಾಪನ ಕೇಂದ್ರಗಳಲ್ಲಿ ನಿಗದಿತ ಅವಧಿ ಮುಗಿದಿರುವ ಮೌಲ್ಯಮಾಪನಗೊಂಡ ಉತ್ತರ ಪತ್ರಿಕೆಗಳು ಹಾಗೂ ಇತರೆ ಅನುಪಯುಕ್ತ ಕಾಗದಪತ್ರಗಳನ್ನು ವಿಲೇಮಾಡಲು ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಇ-ಟೆಂಡರ್ ಪ್ರಕ್ರಿಯೆ ಕೈಗೊಳ್ಳಲಾಗಿದ್ದು, ಟೆಂಡರ್‌ನಲ್ಲಿ ಭಾಗವಹಿಸಿದ್ದ ಐದು ಸಂಸ್ಥೆಗಳಲ್ಲಿ, ತಾಂತ್ರಿಕ ಬಿಡ್‌ನಲ್ಲಿ ಮೂರು ಸಂಸ್ಥೆಗಳು ಅರ್ಹಗೊಂಡಿದ್ದು, ಇವರಲ್ಲಿ ಶ್ರೀ ಗುರುಸಿದ್ದೇಶ್ವರ ಟ್ರೇಡರ್ಸ್, ದಾವಣಗೆರೆ ಇವರು ಉಳಿದವರಿಗಿಂತ ಹೆಚ್ಚಿನ ದರವಾಗಿ ಮೌಲ್ಯಮಾಪನಗೊಂಡ ಉತ್ತರ ಪತ್ರಿಕೆಗಳಿಗೆ ಪ್ರತಿ ಟನ್‌ಗೆ ರೂ.25,799/– (ರೂಪಾಯಿ ಇಪ್ಪತ್ತೈದು ಸಾವಿರದ ಏಳು ನೂರ ತೊಂಬತ್ತೊಂಭತ್ತು ಮಾತ್ರ) ಹಾಗೂ ಇತರೆ ಅನುಪಯುಕ್ತ ಕಾಗದಪತ್ರಗಳಿಗೆ ರೂ.25,300/– (ರೂಪಾಯಿ ಇಪ್ಪತ್ತೈದು ಸಾವಿರದ ಮೂರು ನೂರು ಮಾತ್ರ) ಗಳಂತೆ ದರ ನಮೂದಿಸಿದ್ದರು. ಪ್ರಸ್ತುತ ಆಗಸ್ಟ್/ಸೆಪ್ಟಂಬರ್–2024ರ ಪರೀಕ್ಷಾ ಉತ್ತರ ಪತ್ರಿಕೆಗಳನ್ನು ಸಂರಕ್ಷಿಸಿಡಲು ಸ್ಥಳಾವಕಾಶದ ಕೊರತೆ ಇದ್ದುದ್ದರಿಂದ, ಸಿಂಡಿಕೇಟ್ ಅನುಮೋದನೆ ಕಾಯ್ದಿರಿಸಿ ಮಾನ್ಯ ಕುಲಪತಿಯವರ ಅನುಮೋದನೆ ಪಡೆದುಕೊಂಡು ಅರ್ಹಗೊಂಡ ಸಂಸ್ಥೆಯೊಂದಿಗೆ ದರ ಒಪ್ಪಂದದ ಕರಾರು ಮಾಡಿಕೊಂಡಿರುವ ಕ್ರಮವನ್ನು ಸ್ಥಿರೀಕರಣಕ್ಕಾಗಿ ಮಂಡಿಸಿದೆ ಎಂದರು.

ಶ್ರೀ ಕೆ.ಪಿ. ಶ್ರೀಪಾಲ್‌ರವರು ಮಾತನಾಡಿ, ಮೌಲ್ಯಮಾಪನಗೊಂಡ ಉತ್ತರಪತ್ರಿಕೆಗಳಿಗೆ ಬೇರೆ ಸಂಸ್ಥೆಗಳಲ್ಲಿ ಪ್ರತಿ ಕಿಲೋಗ್ರಾಂಗೆ ರೂ.30–00 ರಿಂದ ರೂ.35–00 ಗಳ ದರ ಇದೆ. ಆದುದರಿಂದ ಟೆಂಡರ್ ಕುರಿತಾಗಿ ಇನ್ನೊಮ್ಮೆ ಪರಿಶೀಲಿಸುವುದು ಉತ್ತಮ. ಹೆಚ್ಚಿನ ದರ ಸಿಕ್ಕಲ್ಲಿ ವಿಶ್ವವಿದ್ಯಾಲಯಕ್ಕೆ ಆರ್ಥಿಕವಾಗಿ ಅನುಕೂಲವಾಗುತ್ತದೆ. ಆದುದರಿಂದ ಮರುಟೆಂಡರ್ ಮಾಡಬಹುದು ಎಂದರು. ಕುಲಸಚಿವ (ಮೌಲ್ಯಮಾಪನ)ರವರು ಮಾತನಾಡಿ, ಇದಕ್ಕಾಗಿ ಈ ಹಿಂದೆಯೇ ಇ–ಟೆಂಡರ್ ನಡೆಸಲಾಗಿತ್ತು. ಹುಬ್ಬಳ್ಳಿಯ ಸಂಸ್ಥೆಯವರು ಪ್ರತಿ ಟನ್‌ಗೆ ರೂ.30,000/–ಗಳ ದರ ನಮೂದಿಸಿದ್ದರು. ಅವರಿಗೆ ಆದೇಶವನ್ನು ಕೂಡ ನೀಡಲಾಗಿತ್ತು. ಆದರೆ, ದರ ಹೆಚ್ಚಾಯಿತೆಂಬ ಕಾರಣ ನೀಡಿ ಉತ್ತರಪತ್ರಿಕೆಗಳನ್ನು ಕೊಂಡೊಯ್ಯಲು ನಿರಾಕರಿಸಿದರು. ಈ ಹಿನ್ನೆಲೆಯಲ್ಲಿ ಅವರ ಇ.ಎಂ.ಡಿ. ಹಣವನ್ನು ಮುಟ್ಟುಗೋಲು ಹಾಕಿಕೊಂಡಿದ್ದು, ಸದರಿ ಸಂಸ್ಥೆಯನ್ನು ಕಪ್ಪುಪಟ್ಟಿಗೆ ಸೇರಿಸಿದೆ. ಮೌಲ್ಯಮಾಪನಗೊಂಡ ಉತ್ತರ ಪತ್ರಿಕೆಗಳನ್ನು ಮರುಬಳಕೆ ಕಾಗದ ತಯಾರಿಸಲು ಮಾತ್ರ ಬಳಸಬೇಕು. ಬೇರಾವುದೇ ಉದ್ದೇಶಕ್ಕೆ ಉಪಯೋಗಿಸುವಂತಿಲ್ಲ ಎಂಬ ನಿಬಂಧನೆ ಇರುತ್ತದೆ. ಅಲ್ಲದೇ, ಉತ್ತರ ಪತ್ರಿಕೆಗಳನ್ನು ಸಂಗ್ರಹಿಸಲು ಸ್ಥಳಾವಕಾಶದ ಕೊರತೆ ಇದ್ದುದ್ದರಿಂದ ಇನ್ನೊಂದು ಟೆಂಡರ್ ಮಾಡಲಾಯಿತು ಎಂದರು. ಶ್ರೀಮತಿ ಸಾಕಮ್ಮರವರು ಮಾತನಾಡಿ, ಮೌಲ್ಯಮಾಪನಗೊಂಡ ಉತ್ತರಪತ್ರಿಕೆಗಳನ್ನು ಕನಿಷ್ಠ ಎರಡು ವರ್ಷಗಳ ಅವಧಿಯವರೆಗಾದರೂ ಸಂರಕ್ಷಿಸಿಡುವುದು ಒಳ್ಳೆಯದು ಎಂದರು. ಮಾನ್ಯ ಕುಲಪತಿಯವರು ಮಾತನಾಡಿ, ದಾಸ್ತಾನು ಕೊಠಡಿಯನ್ನು ಭದ್ರಪಡಿಸಿಕೊಂಡು ಉತ್ತರಪತ್ರಿಕೆಗಳನ್ನು ಎರಡು ವರ್ಷಗಳ ಅವಧಿಯವರೆಗೆ ಸಂರಕ್ಷಿಸಲು ಕ್ರಮ ಕೈಗೊಳ್ಳಬೇಕು ಎಂದರು. ಕುಲಸಚಿವ (ಮೌಲ್ಯಮಾಪನ)ರವರು ಮಾತನಾಡಿ, ಉತ್ತರ ಪತ್ರಿಕೆಗಳನ್ನು ಸಂರಕ್ಷಿಸಿಡಲು ಸಾಕಷ್ಟು ಸ್ಥಳಾವಕಾಶದ ಕೊರತೆ ಇದೆ. ವಿಶ್ವವಿದ್ಯಾಲಯವು ಹೆಚ್ಚಿನ ಮಳೆ ಬೀಳುವ ಮಲೆನಾಡು ಪ್ರದೇಶದಲ್ಲಿದ್ದು, ಉತ್ತರ ಪತ್ರಿಕೆಗಳನ್ನು ಬಹಳ ದಿನಗಳವರೆಗೆ



19/10/24
ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ

ಸಂರಕ್ಷಿಸಿಡುವುದು ಸಾಧ್ಯವಾಗುವುದಿಲ್ಲ. ಮುಂದಿನ ದಿನಗಳಲ್ಲಿ ಡಿಜಿಟಲ್ ಮೌಲ್ಯಮಾಪನಕ್ಕೆ ಕ್ರಮ ಕೈಗೊಳ್ಳುತ್ತಿರುವುದರಿಂದ ಉತ್ತರಪತ್ರಿಕೆಗಳನ್ನು ಸ್ಕ್ಯಾನ್ ಮಾಡಿ ಬಹಳ ವರ್ಷಗಳವರೆಗೆ ಸಂರಕ್ಷಿಸಿಡಲು ಸಾಧ್ಯವಾಗುತ್ತದೆ ಎಂದರು.

ಶ್ರೀ ಮುಸಾವೀರ್ ಬಾಷಾರವರು ಮಾತನಾಡಿ, ಈಗಾಗಲೇ ಒಪ್ಪಂದ ಮಾಡಿಕೊಂಡು ಆದೇಶ ನೀಡಿರುವುದರಿಂದ ಸ್ಥಿರೀಕರಿಸಬಹುದು ಎಂದರು. ಶ್ರೀ ಶಶಿಧರ ಬಿ.ಎನ್. ರವರು ಮಾತನಾಡಿ, ಈಗಾಗಲೇ ಕಾರ್ಯಾದೇಶ ನೀಡಿದ್ದು, ಮರುಟೆಂಡರ್ ನಡೆಸಿದಲ್ಲಿ ಕಾನೂನಾತ್ಮಕ ತೊಡಕುಗಳು ಉಂಟಾಗಬಹುದು. ಆದುದರಿಂದ, ಈಗ ಸ್ಥಿರೀಕರಿಸಬಹುದು. ಇನ್ನು ಮುಂದೆ ಈ ರೀತಿ ಸ್ಥಿರೀಕರಣಕ್ಕೆ ಇಡುವ ಬದಲು, ಸಿಂಡಿಕೇಟ್ ಅನುಮೋದನೆ ಪಡೆದುಕೊಂಡು ಕ್ರಮವಹಿಸುವಂತೆ ಸೂಚಿಸಬೇಕೆಂದರು.

**ನಿರ್ಣಯ:** ಸುದೀರ್ಘ ಚರ್ಚೆಯ ನಂತರ, ಪರೀಕ್ಷಾ ಮೌಲ್ಯಮಾಪನ ಕೇಂದ್ರಗಳಲ್ಲಿ ನಿಗದಿತ ಅವಧಿ ಮುಗಿದಿರುವ ಮೌಲ್ಯಮಾಪನಗೊಂಡ ಉತ್ತರ ಪತ್ರಿಕೆಗಳು ಹಾಗೂ ಇತರೆ ಅನುಪಯುಕ್ತ ಕಾಗದಪತ್ರಗಳನ್ನು ವಿಲೇಮಾಡಲು ಇ-ಟೆಂಡರ್ ಪ್ರಕ್ರಿಯೆ ಮೂಲಕ ಆಯ್ಕೆಗೊಂಡ ಶ್ರೀ ಗುರುಸಿದ್ಧೇಶ್ವರ ಟ್ರೇಡರ್ಸ್, ದಾವಣಗೆರೆ ಇವರೊಂದಿಗೆ ಮಾನ್ಯ ಕುಲಪತಿಯವರ ಅನುಮೋದನೆಯನ್ವಯ ದರ ಒಪ್ಪಂದದ ಕರಾರು ಮಾಡಿಕೊಂಡಿರುವ ವಿಶ್ವವಿದ್ಯಾಲಯದ ಕ್ರಮವನ್ನು ಸಭೆಯು ಅನುಮೋದಿಸಿ ಸ್ಥಿರೀಕರಿಸಿತು.

**2024-ಸಿಂ-4.02(ಎ):** ಏಕರೂಪ ಪರೀಕ್ಷಾ ಸಂಭಾವನೆ/ಶುಲ್ಕಗಳನ್ನು ಯಥಾವತ್ತಾಗಿ ಹಿಂಪಡೆದು, ಈ ಹಿಂದೆ ಚಾಲ್ತಿಯಲ್ಲಿದ್ದಂತಹ ಪರೀಕ್ಷಾ ಭತ್ಯೆ/ಶುಲ್ಕ ಸಂಭಾವನೆಗಳನ್ನೇ ಮುಂದುವರೆಸುವ ಕುರಿತು.

**ಚರ್ಚೆ:** ಕುಲಸಚಿವ(ಮೌಲ್ಯಮಾಪನ)ರವರು ಮಾತನಾಡಿ, ಕರ್ನಾಟಕ ಸರ್ಕಾರವು ದಿನಾಂಕ: 16-10-2022ರಂದು ಹೊರಡಿಸಿದ ಆದೇಶದಲ್ಲಿ ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳು ಏಕರೂಪದ ಶುಲ್ಕ ಮತ್ತು ಸಂಭಾವನೆ ದರಗಳನ್ನು ಅನುಸರಿಸಬೇಕೆಂದು ಸೂಚಿಸಿರುವುದನ್ನು ದಿನಾಂಕ:02-12--2023ರಂದು ನಡೆದ ಸಿಂಡಿಕೇಟ್ ಸಭೆಯಲ್ಲಿ ಅನುಮೋದನೆಯಾಗಿದ್ದರಿಂದ ಸರ್ಕಾರದ ಆದೇಶವನ್ನು ಯಥಾವತ್ತಾಗಿ ಅಳವಡಿಸುವ ಬಗ್ಗೆ ಸುತ್ತೋಲೆ ಹೊರಡಿಸಲಾಗಿತ್ತು. ಆದರೆ, ಏಕರೂಪ ಪರೀಕ್ಷಾ ಶುಲ್ಕ ಮತ್ತು ಸಂಭಾವನೆಯ ದರಗಳ ಮಾದರಿಯು ಕುವೆಂಪು ವಿಶ್ವವಿದ್ಯಾಲಯದಲ್ಲಿ ಈ ಹಿಂದೆ ಜಾರಿಗೊಳಿಸಲಾಗಿದ್ದ ಶುಲ್ಕ ಮತ್ತು ಸಂಭಾವನೆಯ ದರಗಳಿಗೆ ಹೋಲಿಕೆಯಾಗುತ್ತಿಲ್ಲ. ಸರ್ಕಾರ ನಿಗದಿಗೊಳಿಸಿರುವುದರಲ್ಲಿ ಕೆಲವು ಶುಲ್ಕ ಮತ್ತು ಸಂಭಾವನೆಗಳು ಇರುವುದಿಲ್ಲ. ಅಲ್ಲದೆ, ರಾಜ್ಯದ ಬಹಳಷ್ಟು ವಿಶ್ವವಿದ್ಯಾಲಯಗಳು ಸರ್ಕಾರದ ಶುಲ್ಕ ಮತ್ತು ಸಂಭಾವನೆಗಳನ್ನು ಅಳವಡಿಸಿಕೊಂಡಿಲ್ಲ. ಈ ಹಿನ್ನೆಲೆಯಲ್ಲಿ, ಕರ್ನಾಟಕ ಸರ್ಕಾರದ ಏಕರೂಪದ ಶುಲ್ಕ ಮತ್ತು ಸಂಭಾವನೆ ದರಗಳನ್ನು ಅಳವಡಿಸಿಕೊಳ್ಳಲು ವಿಶ್ವವಿದ್ಯಾಲಯವು ದಿನಾಂಕ:05-08-2024 ರಂದು ಹೊರಡಿಸಿರುವ ಆದೇಶವನ್ನು ಹಿಂಪಡೆಯಲು ಹಾಗೂ ಈ ಹಿಂದೆ ಚಾಲ್ತಿಯಲ್ಲಿದ್ದ ಶುಲ್ಕ ಮತ್ತು ಸಂಭಾವನೆ ದರಗಳನ್ನು ದಿನಾಂಕ:01-08-2024ರಿಂದಲೇ ಅನ್ವಯವಾಗುವಂತೆ ಮುಂದುವರಿಸಲು ಅನುಮೋದನೆಗಾಗಿ ಮಂಡಿಸಿದೆ ಎಂದರು.

ಸದಸ್ಯರಾದ ಶ್ರೀ ಕೆ.ಪಿ.ಶ್ರೀಪಾಲ್‌ರವರು ಮಾತನಾಡಿ, ವಿಶ್ವವಿದ್ಯಾಲಯದ ಹಳೆಯ ಶುಲ್ಕಗಳು ಹಾಗೂ ಸರ್ಕಾರದ ಏಕರೂಪ ಶುಲ್ಕಗಳಲ್ಲಿ ಇರುವ ವ್ಯತ್ಯಾಸವೇನು? ಎಂದರು. ಕುಲಸಚಿವ(ಮೌಲ್ಯಮಾಪನ)ರವರು ಮಾಹಿತಿ ನೀಡುತ್ತಾ, ಸರ್ಕಾರ ನಿಗದಿಪಡಿಸಿರುವ ಕೆಲವು ಶುಲ್ಕಗಳು ವಿಶ್ವವಿದ್ಯಾಲಯದ ಶುಲ್ಕಗಳಿಗಿಂತ ಕಡಿಮೆ ಇದ್ದು, ಕೆಲವು ಶುಲ್ಕಗಳು ಜಾಸ್ತಿ ಇವೆ. ಸರ್ಕಾರದ ಶುಲ್ಕಗಳ ಪ್ರಕಾರ ಮೌಲ್ಯಮಾಪಕರ ದಿನಭತ್ಯೆ ಕಡಿಮೆಯಾಗುತ್ತದೆ. ಇದರಿಂದ ಯು.ಜಿ.ಸಿ. ಯೇತರ ವೇತನದ ಅಧ್ಯಾಪಕರು ಮೌಲ್ಯಮಾಪನಕ್ಕೆ ಹಿಂದೇಟು ಹಾಕುತ್ತಿದ್ದು, ಇದು ಶೀಘ್ರವಾಗಿ ಮೌಲ್ಯಮಾಪನ ನಡೆಸಲು ಅಡಚಣೆಯಾಗುತ್ತಿದ್ದು, ಫಲಿತಾಂಶ ಪ್ರಕಟಿಸಲು ವಿಳಂಬವಾಗುತ್ತದೆ ಎಂದರು. ಸಭೆಯಲ್ಲಿದ್ದ ಪ್ರಾಂಶುಪಾಲರುಗಳು ಕೂಡ ಇದಕ್ಕೆ ಧ್ವನಿಗೂಡಿಸಿದರು.

19/10/24

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ

ನಿರ್ಣಯ: ಚರ್ಚೆಯ ನಂತರ, ಕರ್ನಾಟಕ ಸರ್ಕಾರವು ದಿನಾಂಕ:16-10-2022ರಂದು ಹೊರಡಿಸಿದ ಆದೇಶದನ್ವಯ ಏಕರೂಪ ಶುಲ್ಕ ಮತ್ತು ಸಂಭಾವನೆ ದರಗಳನ್ನು ಅನುಸರಿಸಬೇಕೆಂದು ತಿಳಿಸಿದ್ದರ ಮೇರೆಗೆ ಕರ್ನಾಟಕ ಸರ್ಕಾರದ ಏಕರೂಪ ಶುಲ್ಕ ಮತ್ತು ಸಂಭಾವನೆ ದರಗಳನ್ನು ಅಳವಡಿಸಿಕೊಳ್ಳಲು ವಿಶ್ವವಿದ್ಯಾಲಯವು ದಿನಾಂಕ:05-08-2024ರಂದು ಹೊರಡಿಸಿರುವ ಆದೇಶವನ್ನು ಹಿಂಪಡೆಯಲು ಅನುಮೋದಿಸಿದ ಸಭೆಯು, ಈ ಹಿಂದೆ ಚಾಲ್ತಿಯಲ್ಲಿದ್ದ ಶುಲ್ಕ ಮತ್ತು ಸಂಭಾವನೆ ದರಗಳನ್ನು ದಿನಾಂಕ:01-08-2024ರಿಂದಲೇ ಅನ್ವಯವಾಗುವಂತೆ ಮುಂದುವರಿಸಲು ಸರ್ವಾನುಮತದಿಂದ ನಿರ್ಣಯಿಸಿತು.

**2024-ಸಿಂ-4.03:** ಸ್ನಾತಕೋತ್ತರ ವನ್ಯಜೀವಿ ಮತ್ತು ನಿರ್ವಹಣೆ ಅಧ್ಯಯನ ಮಂಡಳಿ ಪುನರ್‌ರಚನೆ ಕುರಿತು.

ವಿಶ್ವವಿದ್ಯಾಲಯದ ಸ್ನಾತಕೋತ್ತರ ವನ್ಯಜೀವಿ ಮತ್ತು ನಿರ್ವಹಣೆ ಅಧ್ಯಯನ ಮಂಡಳಿಯ ಅವಧಿಯು ದಿನಾಂಕ:03-12-2024ಕ್ಕೆ ಮುಕ್ತಾಯವಾಗುತ್ತಿರುವ ಹಿನ್ನೆಲೆಯಲ್ಲಿ ಹೊಸ ಅಧ್ಯಯನ ಮಂಡಳಿಯನ್ನು ರಚಿಸುವ ಸಲುವಾಗಿ ವಿಭಾಗದ ಮುಖ್ಯಸ್ಥರು ಸಲ್ಲಿಸಿದ್ದ ಆಂತರಿಕ ಮತ್ತು ಬಾಹ್ಯ ಪರಿಣಿತರ ಪಟ್ಟಿಯನ್ನು ಕುಲಸಚಿವರು ಸಭೆಯ ಅನುಮೋದನೆಗಾಗಿ ಮಂಡಿಸಿದರು. ಸದಸ್ಯರಾದ ಶ್ರೀ ಕೆ.ಪಿ. ಶ್ರೀಪಾಲ್‌ರವರು ಮಾತನಾಡಿ, ಸಲ್ಲಿಸಿರುವ ಪಟ್ಟಿಯಲ್ಲಿರುವ ಪರಿಣಿತರ ವಿವರಗಳನ್ನು ಸಿಂಡಿಕೇಟ್ ಪರಿಶೀಲಿಸಬೇಕಾಗುತ್ತದೆ. ಆದುದರಿಂದ, ಎಲ್ಲಾ ಪರಿಣಿತರ ವಿವರಗಳನ್ನು ಪಡೆದು ಮುಂದಿನ ಸಭೆಗೆ ಅನುಮೋದನೆಗಾಗಿ ಮಂಡಿಸಿ ಎಂದರು. ಕುಲಸಚಿವ(ಮೌಲ್ಯಮಾಪನ)ರವರು ಮಾತನಾಡಿ, ಅಧ್ಯಯನ ಮಂಡಳಿಯು ಶೈಕ್ಷಣಿಕ ಮತ್ತು ಸಂಶೋಧನಾ ಚಟುವಟಿಕೆಗಳ ಕುರಿತು ನಿರ್ಣಯವನ್ನು ತೆಗೆದುಕೊಳ್ಳುತ್ತದೆ. ವಿಭಾಗಾಧ್ಯಕ್ಷರು ಪಟ್ಟಿಯನ್ನು ಸಿದ್ಧಪಡಿಸುವಾಗ ಎಲ್ಲವನ್ನೂ ಪರಿಶೀಲಿಸಿರುತ್ತಾರೆ ಎಂದರು. ಸದಸ್ಯರಾದ ಶ್ರೀ ಶಿವಕುಮಾರ್‌ರವರು ಮಾತನಾಡಿ, ಹಲವಾರು ಪ್ರಾಧ್ಯಾಪಕರುಗಳ ಅರ್ಹತೆಯ ಬಗ್ಗೆ ಆಗಾಗ್ಗೆ ಮಾಧ್ಯಮಗಳಲ್ಲಿ ವರದಿಯಾಗುತ್ತಿರುತ್ತದೆ. ಶೈಕ್ಷಣಿಕ ಮತ್ತು ಸಂಶೋಧನಾ ಚಟುವಟಿಕೆಗಳಂತಹ ಮಹತ್ತರವಾದ ನಿರ್ಧಾರಗಳನ್ನು ತೆಗೆದುಕೊಳ್ಳುವ ಅಧ್ಯಯನ ಮಂಡಳಿಯ ಸದಸ್ಯರ ಬಗ್ಗೆ ಪರಿಶೀಲಿಸುವುದು ತಪ್ಪಲ್ಲ ಎಂದರು. ಮಾನ್ಯ ಕುಲಪತಿಯವರು ಮಾತನಾಡಿ ಇನ್ನು ಮುಂದೆ, ಅಧ್ಯಯನ ಮಂಡಳಿಯನ್ನು ರಚಿಸುವ ಪೂರ್ವದಲ್ಲಿ ಪರಿಣಿತರ ಬಯೋಡೇಟಾಗಳನ್ನು ಸಿಂಡಿಕೇಟ್ ಸದಸ್ಯರಿಗೆ ಪರಿಚಲಿಸಿ ಅನುಮೋದನೆಗೆ ಮಂಡಿಸಲಾಗುವುದು ಎಂದರು.

ಡಾ.ಸಣ್ಣಹನುಮಪ್ಪರವರು ಮಾತನಾಡಿ, ಸ್ನಾತಕ ಅಧ್ಯಯನ ಮಂಡಳಿಗೆ ಸ್ನಾತಕೋತ್ತರ ಅಧ್ಯಯನ ವಿಭಾಗಗಳ ಅಧ್ಯಾಪಕರು ಅಧ್ಯಕ್ಷರಾಗಿರುತ್ತಾರೆ. ಅದೇ ರೀತಿ ವಿಶ್ವವಿದ್ಯಾಲಯದ ಸ್ನಾತಕೋತ್ತರ ಅಧ್ಯಯನ ಮಂಡಳಿಗಳಿಗೆ ಸ್ನಾತಕ ಕಾಲೇಜಿನಿಂದ ಒಬ್ಬ ಅಧ್ಯಾಪಕರನ್ನು ಸದಸ್ಯರಾಗಿ ನೇಮಕ ಮಾಡಿದಲ್ಲಿ ಹೆಚ್ಚು ಅನುಕೂಲವಾಗುತ್ತದೆ ಎಂದರು. ಮಾನ್ಯ ಕುಲಪತಿಯವರು ಮಾತನಾಡಿ, ಸ್ನಾತಕ ಕಾಲೇಜುಗಳಲ್ಲಿ ಕೂಡ ಬಹಳಷ್ಟು ತಜ್ಞ ಪರಿಣಿತ ಅಧ್ಯಾಪಕರಿದ್ದಾರೆ. ಆದುದರಿಂದ, ಸ್ನಾತಕ ಕಾಲೇಜಿನ ಅಧ್ಯಾಪಕರನ್ನು ಸ್ನಾತಕೋತ್ತರ ಅಧ್ಯಯನ ಮಂಡಳಿಗಳಿಗೆ ಸದಸ್ಯರಾಗಿ ನೇಮಕ ಮಾಡಬಹುದು. ಈ ಬಗ್ಗೆ ನಿಯಮಗಳನ್ನು ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುವುದು ಎಂದರು.

ನಿರ್ಣಯ: ಸುದೀರ್ಘ ಚರ್ಚೆಯ ನಂತರ, ಸ್ನಾತಕೋತ್ತರ ವನ್ಯಜೀವಿ ಮತ್ತು ನಿರ್ವಹಣೆ ಅಧ್ಯಯನ ಮಂಡಳಿಗೆ ಶಿಫಾರಸ್ಸು ಮಾಡಿರುವ ಪರಿಣಿತರ ಬಯೋಡೇಟಾಗಳನ್ನು ಪಡೆದುಕೊಂಡು ಮುಂದಿನ ಸಿಂಡಿಕೇಟ್ ಸಭೆಯ ಅನುಮೋದನೆಗೆ ಮಂಡಿಸಬೇಕೆಂದು ನಿರ್ಣಯಿಸಲಾಯಿತು.

**2024-ಸಿಂ-4.04:** ಸ್ನಾತಕೋತ್ತರ ಇಂಗ್ಲಿಷ್ ಅಧ್ಯಯನ ಮಂಡಳಿ ಪುನರ್‌ರಚನೆ ಕುರಿತು.

ವಿಶ್ವವಿದ್ಯಾಲಯದ ಸ್ನಾತಕೋತ್ತರ ಇಂಗ್ಲಿಷ್ ಅಧ್ಯಯನ ಮಂಡಳಿಯ ಅವಧಿಯು



ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451

ದಿನಾಂಕ:17-08-2024ರಂದು ಮುಕ್ತಾಯವಾಗಿರುವ ಹಿನ್ನೆಲೆಯಲ್ಲಿ, ಹೊಸ ಅಧ್ಯಯನ ಮಂಡಳಿಯನ್ನು ರಚಿಸುವ ಸಲುವಾಗಿ ವಿಭಾಗದ ಮುಖ್ಯಸ್ಥರು ಸಲ್ಲಿಸಿದ್ದ ಆಂತರಿಕ ಮತ್ತು ಬಾಹ್ಯ ಪರಿಣಿತರ ಪಟ್ಟಿಯನ್ನು ಕುಲಸಚಿವರು ಸಭೆಯ ಅನುಮೋದನೆಗಾಗಿ ಮಂಡಿಸಿದರು. ಅಧ್ಯಯನ ಮಂಡಳಿಯ ಅವಧಿಯು ಈಗಾಗಲೇ ಮುಕ್ತಾಯಗೊಂಡಿರುವ ಹಿನ್ನೆಲೆಯಲ್ಲಿ ವಿಭಾಗದ ಶೈಕ್ಷಣಿಕ ಹಾಗೂ ಸಂಶೋಧನಾ ಚಟುವಟಿಕೆಗಳ ದೃಷ್ಟಿಯಿಂದ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಕಾಯ್ದೆ-2000, ಪ್ರಕರಣ 33(1) ಮತ್ತು (2) ರನ್ವಯ ಸ್ನಾತಕೋತ್ತರ ಇಂಗ್ಲಿಷ್ ಅಧ್ಯಯನ ಮಂಡಳಿಯನ್ನು ಪುನರ್ರಚಿಸಲು ಮಾನ್ಯ ಕುಲಪತಿಯವರಿಗೆ ಅಧಿಕಾರ ನೀಡಲಾಯಿತು.

**2024-ಸಿಂ-4.05:** ಸ್ನಾತಕೋತ್ತರ ಎಲೆಕ್ಟ್ರಾನಿಕ್ಸ್ ಅಧ್ಯಯನ ಮಂಡಳಿ ಪುನರ್‌ರಚನೆ ಕುರಿತು.

**ನಿರ್ಣಯ:** ವಿಷಯ ಸಂಖ್ಯೆ:2024-ಸಿಂ-4.03ರಲ್ಲಿ ನಿರ್ಣಯಿಸಿರುವಂತೆ ಸ್ನಾತಕೋತ್ತರ ಎಲೆಕ್ಟ್ರಾನಿಕ್ಸ್ ಅಧ್ಯಯನ ಮಂಡಳಿಗೆ ಶಿಫಾರಸ್ಸು ಮಾಡಿರುವ ಪರಿಣಿತರ ಬಯೋಡೇಟಾಗಳನ್ನು ಪಡೆದುಕೊಂಡು ಮುಂದಿನ ಸಿಂಡಿಕೇಟ್ ಸಭೆಗೆ ಅಧ್ಯಯನ ಮಂಡಳಿ ರಚಿಸಲು ಅನುಮೋದನೆಗೆ ಮಂಡಿಸಬೇಕೆಂದು ನಿರ್ಣಯಿಸಲಾಯಿತು.

**2024-ಸಿಂ-4.06:** ವಿಶ್ವವಿದ್ಯಾಲಯದ ಮಾನ್ಯ ಕುಲಪತಿಗಳ ಕಛೇರಿ ಉಪಯೋಗಕ್ಕಾಗಿ ಇನ್ನೋವಾ ಕ್ರಿಸ್ಟಾ ಹೊಸ ವಾಹನವನ್ನು ಖರೀದಿಸುವ ಬಗ್ಗೆ.

**ನಿರ್ಣಯ:** ವಿಶ್ವವಿದ್ಯಾಲಯದ ಮಾನ್ಯ ಕುಲಪತಿಗಳು ಪ್ರಸ್ತುತ ಉಪಯೋಗಿಸುತ್ತಿರುವ ಇನ್ನೋವಾ ಕಾರನ್ನು ಡಿಸೆಂಬರ್-2017ರಲ್ಲಿ ಖರೀದಿಸಲಾಗಿದ್ದು, ಈವರೆಗೆ ಸುಮಾರು 3.25ಲಕ್ಷ ಕಿಲೋಮೀಟರ್‌ಗಳಿಗೂ ಅಧಿಕ ಚಲಿಸಿದೆ. ಕುಲಪತಿಗಳು ವಿಶ್ವವಿದ್ಯಾಲಯಕ್ಕೆ ಸಂಬಂಧಪಟ್ಟ ವಿವಿಧ ಉದ್ದೇಶಗಳಿಗಾಗಿ ಬೆಂಗಳೂರು ಸೇರಿದಂತೆ ವಿವಿಧ ಸ್ಥಳಗಳಿಗೆ ಪ್ರಯಾಣಿಸಬೇಕಾಗುತ್ತದೆ. ಆದುದರಿಂದ ನೂತನ ವಾಹನದ ಅಗತ್ಯವಿರುವ ಹಿನ್ನೆಲೆಯಲ್ಲಿ ರೂ.34.00 ಲಕ್ಷಗಳ (ಇತರೆ ಜೋಡಣೆ ವೆಚ್ಚ ಪ್ರತ್ಯೇಕ) ಮೌಲ್ಯದ ಹೊಸ Innova Crysta ZX Super White ಕಾರನ್ನು ನಿಯಮಾನುಸಾರ ಖರೀದಿಸಲು ಹಾಗೂ ಈಗಿರುವ ಇನ್ನೋವಾ ಕಾರನ್ನು ಎಲ್ಲಾ ದುರಸ್ತಿಗಳನ್ನು ಮಾಡಿಸಿ ಕುಲಸಚಿವ (ಆಡಳಿತ)ರವರ ಉಪಯೋಗಕ್ಕೆ ಒದಗಿಸಲು ಸಭೆಯು ಸರ್ವಾನುಮತದಿಂದ ಅನುಮೋದಿಸಿತು.

**2024-ಸಿಂ-4.07:** ಅಧ್ಯಕ್ಷರ ಅಪ್ಪಣೆಯ ಮೇರೆಗೆ ಇತರೆ ವಿಷಯಗಳು:

**2024-ಸಿಂ-4.07(1):** **ಶ್ರೀ ಹೆಚ್.ಜಿ. ಅರವಿಂದ ರವರು** ಮಾತನಾಡಿ, ವಿಶ್ವವಿದ್ಯಾಲಯಕ್ಕೆ ಸಂಬಂಧಪಡದ ಕೆಲವು ವ್ಯಕ್ತಿಗಳು ವಿಶ್ವವಿದ್ಯಾಲಯದ ದೈನಂದಿನ ಕೆಲಸಕಾರ್ಯಗಳಲ್ಲಿ ಹಸ್ತಕ್ಷೇಪ ಮಾಡುತ್ತಿರುವುದಾಗಿ ಹಲವಾರು ದೂರುಗಳು ಬಂದಿವೆ. ವಿಶ್ವವಿದ್ಯಾಲಯದ ವಿದ್ಯಾರ್ಥಿಗಳ ಶೈಕ್ಷಣಿಕ ಹಾಗೂ ಸಂಶೋಧನಾ ಚಟುವಟಿಕೆಗಳಿಗೆ ಹಾಗೂ ವಿಶ್ವವಿದ್ಯಾಲಯದ ಆಡಳಿತಕ್ಕೆ ಇದರಿಂದ ತೊಂದರೆಯಾಗಲಿದ್ದು, ಇಂತಹ ಪ್ರಕರಣಗಳನ್ನು ಪ್ರೋತ್ಸಾಹಿಸದೇ ತಡೆಗಟ್ಟಬೇಕು ಎಂದರು. ಈ ಸಂದರ್ಭದಲ್ಲಿ ಮಾತನಾಡಿದ ಶ್ರೀ ಮುಸಾವಿರ್ ಬಾಷಾರವರು ವಿಶ್ವವಿದ್ಯಾಲಯಕ್ಕೆ ಸಂಬಂಧಪಡದ ಕೆಲವು ಬಾಹ್ಯ ವ್ಯಕ್ತಿಗಳು ಅಧ್ಯಾಪಕರು ಹಾಗೂ ಸಿಬ್ಬಂದಿಗಳಿಗೆ ಬೆದರಿಕೆ ಒಡ್ಡುತ್ತಿರುವುದಾಗಿ ತಿಳಿದು ಬಂದಿದೆ. ಅಂತಹ ಪ್ರಕರಣಗಳು ಕಂಡುಬಂದಲ್ಲಿ ಅವರುಗಳ ವಿರುದ್ಧ ಪೋಲೀಸ್ ಠಾಣೆಯಲ್ಲಿ ಎಫ್.ಐ.ಆರ್. ದಾಖಲಿಸುವುದರ ಮೂಲಕ ಅನ್ಯರ ಹಸ್ತಕ್ಷೇಪ ತಡೆಗಟ್ಟಬೇಕು. ವಿಶ್ವವಿದ್ಯಾಲಯದ ಅಧ್ಯಾಪಕ ಮತ್ತು ಅಧ್ಯಾಪಕೇತರ ನೌಕರರು ಸಹ ತಮ್ಮ ಸಹೋದ್ಯೋಗಿಗಳ ವಿರುದ್ಧ ಬಾಹ್ಯ ವ್ಯಕ್ತಿಗಳನ್ನು ಬಳಸಿಕೊಳ್ಳುವುದನ್ನು ಕೂಡ ನಿಯಂತ್ರಿಸಬೇಕು. ಇಂತಹವರಿಂದ ವಿಶ್ವವಿದ್ಯಾಲಯಕ್ಕೆ ಕೆಟ್ಟ ಹೆಸರು ಬರುತ್ತದೆ ಎಂದರು.



9/10/24
ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ

ಈ ಬಗ್ಗೆ ಪರಿಶೀಲಿಸಿ ಕ್ರಮ ಕೈಗೊಳ್ಳುವುದಾಗಿ ಕುಲಸಚಿವರು ಸಭೆಗೆ ತಿಳಿಸಿದರು.

2024–ಸಿಂ–4.07(2): **ಡಾ.ಸಣ್ಣಹನುಮಪ್ಪ ಜಿ. ರವರು** ಮಾತನಾಡಿ, ಇತ್ತೀಚೆಗೆ ವಿಶ್ವವಿದ್ಯಾಲಯವು ಪರಿಸರ ಅಧ್ಯಯನ ವಿಷಯಕ್ಕೆ 3 ಕ್ರೆಡಿಟ್‌ಗಳು ಹಾಗೂ 4 ಗಂಟೆಗಳ ಬೋಧನಾ ಅವಧಿ ನಿಗದಿಪಡಿಸಿದೆ. ಭಾರತ ಸಂವಿಧಾನದ ಪತ್ರಿಕೆಯಲ್ಲಿ ಇದಕ್ಕೆ ವ್ಯತಿರಿಕ್ತವಾಗಿದೆ ಎಂದರು. ಸಭೆಗೆ ಆಹ್ವಾನಿಸಲಾಗಿದ್ದ ಯು.ಯು.ಸಿ.ಎಂ.ಎಸ್. ನೋಡಲ್ ಅಧಿಕಾರಿಗಳಾದ ಪ್ರೊ. ಎಂ.ಆರ್.ಸತ್ಯಪ್ರಕಾಶ್‌ರವರು ಮಾತನಾಡಿ, ಪರಿಸರ ಅಧ್ಯಯನ ವಿಷಯದ ಪತ್ರಿಕೆಯ ಬಗ್ಗೆ ಇತ್ತೀಚೆಗೆ ರಾಜ್ಯ ನೋಡಲ್ ಅಧಿಕಾರಿಗಳು ಮಾಹಿತಿ ಹಂಚಿಕೊಂಡಿದ್ದು, ಪರಿಸರ ಅಧ್ಯಯನ ಪತ್ರಿಕೆಗೆ 3 ಕ್ರೆಡಿಟ್‌ಗಳು ಇದ್ದು, 4 ಗಂಟೆಗಳ ಬೋಧನಾ ಅವಧಿ ಇರುತ್ತದೆ. ರಾಜ್ಯದ ವಿವಿಧ ವಿಶ್ವವಿದ್ಯಾಲಯಗಳಲ್ಲಿ ಈಗಾಗಲೇ ಅನುಷ್ಠಾನಗೊಳಿಸಿದ್ದು, ರಾಜ್ಯ ನೋಡಲ್ ಅಧಿಕಾರಿಗಳ ಮೌಖಿಕ ಸೂಚನೆಯ ಮೇರೆಗೆ ಮಾನ್ಯ ಕುಲಪತಿಯವರ ಅನುಮೋದನೆ ಪಡೆದುಕೊಂಡು ಅಧ್ಯಯನ ಮಂಡಳಿಯ ಅನುಮೋದನೆಯನ್ನು ಕಾಯ್ದಿರಿಸಿ ಸುತ್ತೋಲೆ ಹೊರಡಿಸಲಾಗಿದೆ ಎಂದರು.

ಡಾ.ಅನಂತ, ಎಸ್.ರವರು ಮಾತನಾಡಿ 4 ಗಂಟೆಗಳಿಗಿಂತ ಕಡಿಮೆ ಅವಧಿ ಇದ್ದಲ್ಲಿ ಅಧ್ಯಾಪಕರು/ ಅತಿಥಿ ಉಪನ್ಯಾಸಕರನ್ನು ನೇಮಿಸಿಕೊಳ್ಳಲು ಅವಕಾಶವಿಲ್ಲ ಎಂದರು. ಡಾ.ಸಣ್ಣಹನುಮಪ್ಪರವರು ಮಾತನಾಡಿ 4 ಗಂಟೆಗಳು ಯಾವ ಕೋರ್ಸ್‌ಗೆ ಎಂಬುದನ್ನು ನಮೂದಿಸಿಲ್ಲ ಎಂದರು. ಶ್ರೀ ಶಶಿಧರ ಬಿ.ಎನ್. ರವರು ಮಾತಾಡಿ, ಸಿಲಬಸ್ ಜೊತೆಯಲ್ಲಿಯೇ ಭೋಧನಾ ಅವಧಿ, ಕ್ರೆಡಿಟ್‌ಗಳು, ಪ್ರಶ್ನೆಪತ್ರಿಕೆ ಮಾದರಿ ಮುಂತಾದವುಗಳನ್ನು ಒದಗಿಸಬೇಕು ಎಂದರು.

ಮಾನ್ಯ ಕುಲಪತಿಯವರು ಮಾತನಾಡಿ, ಶಿಕ್ಷಕರಿಗೆ ಎಷ್ಟು ಕಾರ್ಯಭಾರ ಬೇಕು ಎಂಬುದರ ಬಗ್ಗೆ ನಾವೆಲ್ಲರೂ ಚರ್ಚಿಸುತ್ತೇವೆ. ಆದರೆ, ಮಕ್ಕಳಿಗೆ ಏನನ್ನು ನೀಡಬೇಕು ಎಂಬುದರ ಕುರಿತಾಗಿ ಪರಿಶೀಲಿಸುವುದಿಲ್ಲ. ಶಿಕ್ಷಕರಿಗೆ ಅನುಕೂಲ ಮಾಡಿಕೊಡುವ ಸಲುವಾಗಿ ಹೆಚ್ಚಿನ ಕಾರ್ಯಭಾರ ಒದಗಿಸಬೇಕು ಎಂಬುದನ್ನು ಗಮನದಲ್ಲಿಟ್ಟುಕೊಂಡು ಮಕ್ಕಳ ಮೇಲೆ ಹೆಚ್ಚಿನ ಭಾರ ಹಾಕುವುದು ಸರಿಯಲ್ಲ. ಬೋಧನಾ ಅವಧಿ 4 ಗಂಟೆಗಳು ಇರುವುದಾದಲ್ಲಿ ವಿದ್ಯಾರ್ಥಿಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ತರಗತಿಯಲ್ಲಿ ಕೂರಿಸಿಕೊಂಡು ನಾಲ್ಕು ಗಂಟೆಗಳ ಕಾಲ ಕೇವಲ ಬೋಧನೆ ಮಾಡುವುದರಿಂದ ಉಪಯೋಗವಿಲ್ಲ. ಈಗಿನ ಮಕ್ಕಳಿಗೆ ಕಲಿಯುವ ಸಾಮರ್ಥ್ಯ ಸಹಜವಾಗಿಯೇ ಚೆನ್ನಾಗಿರುತ್ತದೆ. ಆದುದರಿಂದ, ನಿಗದಿಪಡಿಸಿರುವ 4 ಗಂಟೆಗಳಲ್ಲಿ, 3 ಗಂಟೆಗಳನ್ನು ಬೋಧನೆಗೆ ಇರಿಸಿಕೊಂಡು, ಉಳಿದ ಒಂದು ಗಂಟೆಯಲ್ಲಿ ಗುಂಪುಚರ್ಚೆ, ವಿಚಾರಸಂಕಿರಣ, ಕಾರ್ಯಾಗಾರ ಇತ್ಯಾದಿ ಪರಿಸರ ಆಧಾರಿತ ವಿಷಯಗಳ ಬಗ್ಗೆ ಕಾರ್ಯಕ್ರಮಗಳನ್ನು ನಡೆಸಬೇಕು. ಹಾಗಿದ್ದಲ್ಲಿ ಮಾತ್ರ ಮಕ್ಕಳಿಗೆ ಉಪಯೋಗವಾಗುತ್ತದೆ. ಪತ್ರಿಕೆಯ ಸಿಲಬಸ್‌ನ್ನು ಕ್ರಿಯಾತ್ಮಕವಾಗಿ ಸಿದ್ಧಪಡಿಸಬೇಕು. ವಿದ್ಯಾರ್ಥಿಗಳು ತರಗತಿಗಳನ್ನು ಸಂತೋಷದಿಂದ ಅನುಭವಿಸುವಂತಿರಬೇಕು ಎಂದರು.

ಮೇಲಿನಂತೆ ಚರ್ಚಿತ ವಿಷಯವನ್ನು ಕಾರ್ಯಗತಗೊಳಿಸಲು ಸಭೆಯು ನಿರ್ಣಯಿಸಿತು.

2024–ಸಿಂ–4.07(3): **ಮಾನ್ಯ ಕುಲಪತಿಯವರು** ಮಾತನಾಡಿ, ವಿಶ್ವವಿದ್ಯಾಲಯದ 34ನೇ ವಾರ್ಷಿಕ ಘಟಿಕೋತ್ಸವದಲ್ಲಿ ಗೌರವ ಡಾಕ್ಟರೇಟ್ ಪ್ರದಾನ ಮಾಡಲು ದಿನಾಂಕ:19-07-2024ರಂದು ನಡೆದ ಸಿಂಡಿಕೇಟ್ ಸಭೆಯಲ್ಲಿ ಅನುಮೋದಿಸಿರುವ ಗಣ್ಯರ ಪಟ್ಟಿಯನ್ನು ಸಭೆಯ ಗಮನಕ್ಕೆ ಮತ್ತೊಮ್ಮೆ ತಂದರು. ಸದರಿ ಪಟ್ಟಿಯಿಂದ ಮೂವರು ಗಣ್ಯರನ್ನು ಆಯ್ಕೆ ಮಾಡಿ ಘನತೆವೆತ್ತ ಕುಲಾಧಿಪತಿಗಳಿಗೆ ಶಿಫಾರಸ್ಸು ಮಾಡಲು ವಿಶ್ರಾಂತ ಕುಲಪತಿಯವರಾದ ಡಾ.ಕೆ.ಚಿದಾನಂದಗೌಡರವರ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ರಚಿಸಲಾಗಿದೆ ಎಂದರು. ಶ್ರೀ ಕೆ.ಪಿ.ಶ್ರೀಪಾಲ್‌ರವರು ಮಾತನಾಡಿ, ಡಾ.ಕೆ.ಚಿದಾನಂದಗೌಡರವರು ಉತ್ತಮ ಆಯ್ಕೆ. ಆದರೆ, ಅದೇ ವಿಶ್ವವಿದ್ಯಾಲಯದ ಕುಲಪತಿಯವರನ್ನು ಸಮಿತಿಯ ಅಧ್ಯಕ್ಷರಾಗಿ ನೇಮಕ ಮಾಡುವ ಬಗ್ಗೆ ರಾಜ್ಯಪಾಲರು ಆಕ್ಷೇಪ



ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ

ವ್ಯಕ್ತಪಡಿಸಬಹುದು. ಆದುದರಿಂದ, ಈ ಬಗ್ಗೆ ಇನ್ನೊಮ್ಮೆ ಪರಿಶೀಲಿಸುವುದು ಒಳಿತು ಎಂದರು.

ಮಾನ್ಯ ಕುಲಪತಿಯವರು ಮಾತನಾಡಿ, ಈ ಬಗ್ಗೆ ಪರಿಶೀಲಿಸಿ ಕ್ರಮಕೈಗೊಳ್ಳಲಾಗುವುದು ಎಂದರು.

**2024–ಸಿಂ–4.07(4):** **ಶ್ರೀ ಮುಸಾವೀರ್ ಬಾಷಾರವರು** ಮಾತನಾಡಿ, ವಿಶ್ವವಿದ್ಯಾಲಯದ ಹಾಸ್ಟೆಲ್‌ಗಳಲ್ಲಿ ಊಟ ಸರಿಯಿಲ್ಲವೆಂದು ದೂರುಗಳು ಬರುತ್ತಿವೆ. ಈ ಹಿಂದೆ ಆತ್ಮಹತ್ಯೆಗೆ ಯತ್ನಿಸಿದ್ದ ವಿದ್ಯಾರ್ಥಿಯೊಬ್ಬ ಡೆತ್‌ನೋಟ್‌ನಲ್ಲಿ ಕೂಡ ಇದನ್ನು ಪ್ರಸ್ತಾಪಿಸಿದ್ದರು. ಆದುದರಿಂದ, ಈ ಬಗ್ಗೆ ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದರು.

ಕುಲಸಚಿವ(ಮೌಲ್ಯಮಾಪನ)ರವರು ಮಾತನಾಡಿ, ವಿಶ್ವವಿದ್ಯಾಲಯದ ಎಲ್ಲಾ ಹಾಸ್ಟೆಲ್‌ಗಳಲ್ಲಿನ ಊಟೋಪಚಾರದ ವ್ಯವಸ್ಥೆಯನ್ನು ವಿದ್ಯಾರ್ಥಿಗಳಿಂದ ಆಯ್ಕೆಯಾದ ಪ್ರಿಫೆಕ್ಟ್‌ರ್‌ಗಳು ನಿರ್ವಹಿಸುತ್ತಾರೆ. ದಿನಸಿ, ತರಕಾರಿ ಸೇರಿದಂತೆ ಎಲ್ಲವುಗಳ ಖರೀದಿ ಮತ್ತು ನಿರ್ವಹಣೆ ಅವರದೇ ಆಗಿರುತ್ತದೆ. ಅವರೇ ಹಾಸ್ಟೆಲ್ ನಡೆಸುತ್ತಾರೆ. ಇದೇ ರೀತಿಯ ದೂರುಗಳು ಮುಂದುವರಿದಲ್ಲಿ ಪ್ರಿಫೆಕ್ಟ್‌ರ್‌ಶಿಪ್ ವ್ಯವಸ್ಥೆ ರದ್ದುಗೊಳಿಸಿ ವಿಶ್ವವಿದ್ಯಾಲಯದ ವತಿಯಿಂದಲೇ ಹಾಸ್ಟೆಲ್‌ಗಳನ್ನು ನಡೆಸುವಂತಾಗಬೇಕಾಗುತ್ತದೆ ಎಂದರು. ಸದಸ್ಯರಾದ ಡಾ.ಅನಂತ್ ಎಸ್. ರವರು ಮಾತನಾಡಿ, ಬಹಳ ವರ್ಷಗಳಿಂದಲೂ ಪ್ರಿಫೆಕ್ಟ್‌ರ್‌ಗಳ ಬಗ್ಗೆ ದೂರುಗಳಿವೆ ಎಂದರು. ಕುಲಸಚಿವರು ಮಾತನಾಡಿ, ಪ್ರಿಫೆಕ್ಟ್‌ರ್‌ಗಳ ಬದಲು ವಿಶ್ವವಿದ್ಯಾಲಯವೇ ಹಾಸ್ಟೆಲ್ ನಡೆಸಿದಲ್ಲಿ ಇನ್ನೂ ಹೆಚ್ಚಿನ ಅನಗತ್ಯ ದೂರುಗಳು ಕೂಡ ಬರಬಹುದು ಎಂದರು. ಮಾನ್ಯ ಕುಲಪತಿಯವರು ಮಾತನಾಡಿ, ವಿದ್ಯಾರ್ಥಿಗಳು ಮಾಂಸಾಹಾರ ಕೇಳುತ್ತಿದ್ದಾರೆ, ಕೊಡಬಹುದು ಎಂದರು.

ಹಾಸ್ಟೆಲ್‌ಗೆ ಸಂಬಂಧಪಟ್ಟಂತೆ ಮೇಲಿನ ಎಲ್ಲಾ ವಿಷಯಗಳ ಕುರಿತು ಪರಿಶೀಲಿಸಿ ಕ್ರಮ ಕೈಗೊಳ್ಳುವಂತೆ ಸಭೆಯು ನಿರ್ಣಯಿಸಿತು.

**2024–ಸಿಂ–4.07(5):** ಶ್ರೀ ಲಕ್ಷ್ಮಿಕಾಂತ ಚಿಮನೂರುರವರು ಮಾತನಾಡಿ, ವಿಶ್ವವಿದ್ಯಾಲಯದ ಸ್ನಾತಕೋತ್ತರ ಅಧ್ಯಯನ ವಿಭಾಗಗಳು ಮತ್ತು ಘಟಕ ಕಾಲೇಜುಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅತಿಥಿ ಉಪನ್ಯಾಸಕರು ಬಹಳ ವರ್ಷಗಳಿಂದ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಅವರಿಗೆ ಮತ್ತೊಮ್ಮೆ ಸಂದರ್ಶನ ನಡೆಸುವ ಬದಲು, ಅವರನ್ನೇ ಮುಂದುವರೆಸುವುದು ಉತ್ತಮ ಎಂಗರು. ಶ್ರೀಮತಿ ಸಾಕಮ್ಮರವರು ಕೂಡ ಇದಕ್ಕೆ ಧ್ವನಿಗೂಡಿಸಿದರು. ಶ್ರೀ ಕೆ.ಪಿ.ಶ್ರೀಪಾಲ್‌ರವರು ಮಾತನಾಡಿ, ಈ ಹಿಂದೆ, ಭರತ್ ಪ್ರಕರಣದಲ್ಲಿ ಕರ್ನಾಟಕ ಉಚ್ಚ ನ್ಯಾಯಾಲಯ ನೀಡಿರುವ ತೀರ್ಪಿನಂತೆ ಕುವೆಂಪು ವಿಶ್ವವಿದ್ಯಾಲಯ ನಡೆದುಕೊಳ್ಳುತ್ತಿದೆ. ತೀರ್ಪಿನಲ್ಲಿ ಯು.ಜಿ.ಸಿ. ನಿಯಮ ಮತ್ತು ಕರ್ನಾಟಕ ಸರ್ಕಾರದ ಆದೇಶದ ಪ್ರಕಾರ ಅತಿಥಿ ಉಪನ್ಯಾಸಕರನ್ನು ನೇಮಕ ಮಾಡುವಂತೆ ತಿಳಿಸಿದೆ. ಕಳೆದ ವರ್ಷ ನೇಮಕಾತಿಯು ಬಹಳ ವಿಳಂಬವಾಗಿದೆ. 2023–24ನೇ ಸಾಲಿನಲ್ಲಿ ವೀಡಿಯೋ ಚಿತ್ರೀಕರಣ ನಡೆಸಿ ಸಂದರ್ಶನ ನಡೆಸಿದೆ. ಆದುದರಿಂದ, ಹಳಬರನ್ನು ಮುಂದುವರೆಸಿ, ಹೊಸ ನೇಮಕಾತಿಗೆ ಮಾತ್ರ ಸಂದರ್ಶನ ನಡೆಸಬಹುದು ಎಂದರು.

ಮಾನ್ಯ ಕುಲಪತಿಯವರು ಮಾತನಾಡಿ, ಮಾನ್ಯ ಸದಸ್ಯರುಗಳ ಕಳಕಳಿಯನ್ನು ವಿಶ್ವವಿದ್ಯಾಲಯವು ಗೌರವಿಸುತ್ತದೆ. ಹಲವಾರು ಅತಿಥಿ ಉಪನ್ಯಾಸಕರು ಬಹಳ ವರ್ಷಗಳಿಂದ ಕಾರ್ಯನಿರ್ವಹಿಸುತ್ತಿದ್ದಾರೆ. ಶ್ರೀ ಕೆ.ಪಿ.ಶ್ರೀಪಾಲ್‌ರವರು ತಿಳಿಸಿದಂತೆ, ಯು.ಜಿ.ಸಿ. ನಿಯಮಗಳು ಹಾಗೂ ಸರ್ಕಾರದ ಆದೇಶಗಳ ಪ್ರಕಾರ ಸಹಾಯಕ ಪ್ರಾಧ್ಯಾಪಕರ ನೇಮಕದ ರೀತಿಯಲ್ಲಿಯೇ ಕ್ರಮ ಕೈಗೊಳ್ಳಲಾಗುತ್ತಿದೆ. ಈಗಿರುವವರನ್ನು ನಿರಂತರವಾಗಿ ಮುಂದುವರಿಸಿದರೆ, ಕಾರ್ಮಿಕ ಕಾನೂನಿನ ಪ್ರಕಾರ ತೊಂದರೆಯಾಗುತ್ತದೆ. ಈ ಬಗ್ಗೆ ಕಾನೂನು ಅಭಿಪ್ರಾಯ ಪಡೆಯಬೇಕಾಗುತ್ತದೆ. ಬಹಳ ವರ್ಷಗಳಿಂದ ಸೇವೆ ಸಲ್ಲಿಸುತ್ತಿರುವವರಿಗೆ ಒಂದು Intraction ರೀತಿ ಮಾಡಬಹುದು. ಕೆಲವರು ಸಮರ್ಪಕವಾಗಿ ಪಾಠ ಪ್ರವಚನಗಳನ್ನು ನಿರ್ವಹಿಸುತ್ತಿಲ್ಲವೆಂದು ದೂರುಗಳಿವೆ. ಅಂತಹವರನ್ನು ಹಾಗೂ ಯು.ಜಿ.ಸಿ. ನಿಯಮದ ಪ್ರಕಾರ ಅರ್ಹತೆ



13/10/24

ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ

ಇಲ್ಲದವರನ್ನು ಬದಲಿಸಬೇಕಾಗುತ್ತದೆ. ಈ ರೀತಿಯಾದಲ್ಲಿ ಮಾತ್ರ ಅರ್ಹ ಹೊಸಬರನ್ನು ನೇಮಕ ಮಾಡಿಕೊಳ್ಳಲು ಸಾಧ್ಯವಾಗುತ್ತದೆ. ಅತಿಥಿ ಉಪನ್ಯಾಸಕರು ಬೋಧನೆಯ ಜೊತೆಯಲ್ಲಿಯೇ ಸಂಶೋಧನಾ ಚಟುವಟಿಕೆಗಳಲ್ಲಿ ಕೂಡ ಭಾಗವಹಿಸಬೇಕು ಎಂದರು. ಶ್ರೀ ಮುಸಾವೀರ್ ಬಾಷಾರವರು ಮಾತನಾಡಿ, 10 ವರ್ಷಗಳಿಗಿಂತ ಹೆಚ್ಚಿನ ಅವಧಿಯಲ್ಲಿ ಸೇವೆ ಸಲ್ಲಿಸುತ್ತಿರುವವರನ್ನು ಮುಂದುವರೆಸಿ, ಉಳಿದ ಸ್ಥಾನಗಳಿಗೆ ಸಂದರ್ಶನ ನಡೆಸಬಹುದು ಎಂದರು. ಶ್ರೀ ಬಿ.ಎನ್.ಶಶಿಧರ್‌ರವರು ಮಾತನಾಡಿ, ಸೇವೆಯನ್ನು ಅರ್ಹತೆಯನ್ನಾಗಿ ಪರಿಗಣಿಸಿ ಸಂದರ್ಶನದ ಮೂಲಕ ಆಯ್ಕೆ ಮಾಡುವುದು ಒಳಿತು ಎಂದರು. ಶ್ರೀ ಶಿವಕುಮಾರ್ ಎಂ. ರವರು ಮಾತನಾಡಿ, ವಿಶ್ವವಿದ್ಯಾಲಯಕ್ಕೆ ವಿದ್ಯಾರ್ಥಿಗಳು ಮತ್ತು ಅಧ್ಯಾಪಕರು ಆಧಾರ ಸ್ಥಂಭಗಳು ಇದ್ದಂತೆ. ಇವರಿಗೆ ಹೆಚ್ಚಿನ ಪ್ರಾಧಾನ್ಯತೆ ಕೊಡಬೇಕು. 15–20 ವರ್ಷಗಳ ಕಾಲ ಸಂಸ್ಥೆಯಲ್ಲಿ ದುಡಿದವರಿಗೆ ಪ್ರತಿ ವರ್ಷ ಸಂದರ್ಶನ ನಡೆಸುವುದು ಸರಿಯಲ್ಲ. 15ಕ್ಕಿಂತ ಹೆಚ್ಚಿನ ವರ್ಷಗಳ ಕಾಲ ಸೇವೆ ಸಲ್ಲಿಸಿದವರಿಗೆ Intraction ರೀತಿ ಮಾಡಿ ಉಳಿದವರಿಗೆ ಹಾಗೂ ಹೊಸ ಹುದ್ದೆಗಳು ಖಾಲಿ ಇದ್ದಲ್ಲಿ ಸಂದರ್ಶನ ನಡೆಸಬಹುದು ಎಂದರು.

ಡಾ.ಅನಂತ್ ಎಸ್.ರವರು ಮಾತನಾಡಿ ಅತಿಥಿ ಉಪನ್ಯಾಸಕರ ವಾರ್ಷಿಕ ವೇತನವು ಐದು ಲಕ್ಷ ರೂಪಾಯಿಗಳನ್ನು ಮೀರುವುದಿಲ್ಲ. ಅವರು ಆದಾಯ ತೆರಿಗೆಯ ವ್ಯಾಪ್ತಿಗೆ ಒಳಪಡುವುದಿಲ್ಲ. ಆದಾಗ್ಯೂ ಅವರ ವೇತನದಲ್ಲಿ ಆದಾಯತೆರಿಗೆ ಕಟಾಯಿಸಲಾಗುತ್ತಿದೆ. ಈ ಬಗ್ಗೆ ಪರಿಶೀಲಿಸಿ ಎಂದರು.

ಶ್ರೀಮತಿ ಸಾಕಮ್ಮರವರು ಮಾತನಾಡಿ, ವಿಶ್ವವಿದ್ಯಾಲಯ ಹಾಗೂ ಘಟಕ ಕಾಲೇಜುಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅತಿಥಿ ಉಪನ್ಯಾಸಕರು ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಅತಿಥಿ ಉಪನ್ಯಾಸಕರ/ಖಾಯಂ ನೇಮಕಾತಿಗೆ ಅರ್ಜಿ ಸಲ್ಲಿಸುವಾಗ ವಿಶ್ವವಿದ್ಯಾಲಯದಲ್ಲಿ ಸಲ್ಲಿಸಿದ ಸೇವೆಯನ್ನು ಪರಿಗಣಿಸುತ್ತಿಲ್ಲ. ಹಾಗೆಯೇ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಸಲ್ಲಿಸಿದ ಸೇವೆಯನ್ನು ವಿಶ್ವವಿದ್ಯಾಲಯ ಪರಿಗಣಿಸುತ್ತಿಲ್ಲ. ಇದರಿಂದ ಅವರಿಗೆ ತೊಂದರೆಯಾಗುತ್ತಿದೆ. ಈ ಬಗ್ಗೆ ಪರಿಶೀಲಿಸಿ ಸರ್ಕಾರದೊಂದಿಗೆ ಪತ್ರ ವ್ಯವಹಾರ ನಡೆಸಿ ಸರಿಪಡಿಸಬೇಕು ಎಂದರು.

ಕುಲಸಚಿವ(ಮೌಲ್ಯಮಾಪನ)ರವರು ಮಾತನಾಡಿ, ಕೆಲವು ವಿಭಾಗಗಳು ಹಾಗೂ ಕಾಲೇಜುಗಳಲ್ಲಿ ಅಗತ್ಯಕ್ಕಿಂತ ಹೆಚ್ಚಿನ ಸಂಖ್ಯೆಯ ಅತಿಥಿ ಉಪನ್ಯಾಸಕರು ಹಾಗೂ ಹೊರಗುತ್ತಿಗೆ ಸಿಬ್ಬಂದಿಗಳಿದ್ದಾರೆ. ಅದನ್ನು ಪರಿಶೀಲಿಸಿ ಕಡಿತಗೊಳಿಸಲು ಕ್ರಮ ಕೈಗೊಳ್ಳಬೇಕಾಗುತ್ತದೆ. ವಿಶ್ವವಿದ್ಯಾಲಯದ ಹಣಕಾಸಿನ ಸ್ಥಿತಿ ಉತ್ತಮವಾಗಿಲ್ಲ. ಈ ಹಿನ್ನೆಲೆಯಲ್ಲಿ ಕೆಲವು ಕಠಿಣ ಕ್ರಮಗಳನ್ನು ಕೈಗೊಳ್ಳಬೇಕಾಗುತ್ತದೆ. ಹದಿನೈದು ವರ್ಷಗಳಿಗಿಂತ ಹೆಚ್ಚಿನ ಸೇವಾ ಅನುಭವ + ಯು.ಜಿ.ಸಿ. ನಿಯಮದ ಪ್ರಕಾರ ಅರ್ಹತೆ ಉಳ್ಳವರಿಗೆ ಒಂದು ಮಾನದಂಡ ಹಾಗೂ ಉಳಿದವರಿಗೆ ಒಂದು ಮಾನದಂಡ ನಿಗದಿಪಡಿಸಿ ನೇಮಕ ಮಾಡಬಹುದು ಎಂದರು.

ಕುಲಸಚಿವರು ಮಾತನಾಡಿ, ವಿಶ್ವವಿದ್ಯಾಲಯಕ್ಕೆ ಸುಮಾರು 25 ವರ್ಷಗಳಿಗೂ ಹಿಂದೆ ಮಂಜೂರಾದ ಹುದ್ದೆಗಳಿಗೆ ಮಾತ್ರ ನೇಮಕ ಮಾಡಿದೆ. ಸರ್ಕಾರದ ಪ್ರಕಾರ ಮಂಜೂರಾದ ಹುದ್ದೆಗಳಲ್ಲಿ ಖಾಲಿ ಇರುವ ಹುದ್ದೆಗಳಿಗೆ ಮಾತ್ರ ಅತಿಥಿ ಉಪನ್ಯಾಸಕರನ್ನು ನೇಮಕ ಮಾಡಬೇಕು. ಆದರೆ, ನಂತರದಲ್ಲಿ ಹೊಸ ವಿಭಾಗಗಳು ಆರಂಭವಾಗಿವೆ. ವಿದ್ಯಾರ್ಥಿಗಳ ಸಂಖ್ಯೆ ಕೂಡ ಹೆಚ್ಚಾಗಿದೆ. ಹೊಸ ಹುದ್ದೆಗಳ ಸೃಜನೆ ಮಾಡಲು ಪ್ರಸ್ತಾವನೆ ಸಲ್ಲಿಸಿಲ್ಲ. ಅನುಮೋದನೆಗಾಗಿ ಸಲ್ಲಿಸುತ್ತಿರುವ ವಿನಿಯಮಗಳನ್ನು ಸರ್ಕಾರ ಅನುಮೋದಿಸುತ್ತಿಲ್ಲ. 38 ವಿಭಾಗಗಳಲ್ಲಿ ಕೇವಲ 07 ವಿಭಾಗಗಳ ವಿನಿಯಮ ಅನುಮೋದನೆಯಾಗಿದ್ದು, ಆ ವಿಭಾಗಗಳಿಗೆ ಮಾತ್ರ ಹುದ್ದೆಗಳು ಮಂಜೂರಾಗಿವೆ. ಉಳಿದ ಅಧ್ಯಯನ ವಿಭಾಗಗಳ ವಿನಿಯಮ ಅನುಮೋದನೆಯಾದರೆ, ಹೊಸ ಹುದ್ದೆಗಳು ಮಂಜೂರಾಗುತ್ತವೆ. ವಿಶ್ವವಿದ್ಯಾಲಯದ



19/10/24

ಭೂಪ್ರದೇಶವು ಲೀಸ್‌ನಲ್ಲಿದ್ದು, ಲೀಸ್ ಮುಂದುವರಿಕೆಯಾಗಿಲ್ಲ. ಮುಂದುವರಿಕೆಗೆ ಪ್ರಯತ್ನಿಸಲಾಗುತ್ತಿದೆ. ಸಿಂಗನಮನೆ ವ್ಯಾಪ್ತಿಯಲ್ಲಿ ವಿಶ್ವವಿದ್ಯಾಲಯದ 100 ಎಕರ ಜಾಗ ಇದೆ. ಅದರ ಬಗ್ಗೆ ಕೂಡ ಸರ್ಕಾರದ ಹಂತದಲ್ಲಿ ಪ್ರಯತ್ನಿಸಲಾಗುತ್ತಿದೆ. ಅಧ್ಯಾಪಕೇತರ ನೌಕರರ ನೇಮಕಾತಿ, ಮುಂಬಡ್ತಿ ಸೇರಿದಂತೆ ಸೇವಾ ವಿಷಯಕ್ಕೆ ಸಂಬಂಧಪಟ್ಟ ಸಿ. ಅಂಡ್ ಆರ್. ನಿಯಮ ಈವರೆಗೂ ಆಗಿಲ್ಲ. ಮೈಸೂರು ವಿಶ್ವವಿದ್ಯಾಲಯದ ಸಿ. ಅಂಡ್ ಆರ್. ನಿಯಮವನ್ನೇ ಇನ್ನೂ ಅಳವಡಿಸಿಕೊಳ್ಳಲಾಗುತ್ತಿದೆ. ಕುವೆಂಪು ವಿಶ್ವವಿದ್ಯಾಲಯವು ತನ್ನದೇ ಆದ ಸಿ. ಆಂಡ್ ಆರ್. ನಿಯಮ ರಚಿಸುವಂತೆ ಸರ್ಕಾರ ತಿಳಿಸುತ್ತಿದೆ. ಈ ಹಿನ್ನೆಲೆಯಲ್ಲಿ ಸರ್ಕಾರದ ಸಿಬ್ಬಂದಿ ಮತ್ತು ಆಡಳಿತ ಇಲಾಖೆಯ ನಿವೃತ್ತ ಅಧಿಕಾರಿಗಳನ್ನು ಒಳಗೊಂಡ ಒಂದು ಸಮಿತಿಯನ್ನು ರಚಿಸಲಾಗಿದೆ. ಸಮಿತಿಯ ಶಿಫಾರಸ್ಸನ್ನು ಮುಂದೆ ಸಿಂಡಿಕೇಟ್ ಮತ್ತು ವಿದ್ಯಾವಿಷಯಕ ಪರಿಷತ್ ಸಭೆಯ ಅನುಮೋದನೆಗೆ ಮಂಡಿಸಲಾಗುವುದು ಎಂದರು.

ಶ್ರೀ ಕೆ.ಪಿ. ಶ್ರೀಪಾಲ್‌ರವರು ವಿಶ್ವವಿದ್ಯಾಲಯದ ಸಮಗ್ರ ಅಭಿವೃದ್ಧಿಯ ಕುರಿತಾಗಿ ಪ್ರಸ್ತಾವನೆಗಳನ್ನು ಸಿದ್ಧಪಡಿಸಿ, ಶಿವಮೊಗ್ಗ ಮತ್ತು ಚಿಕ್ಕಮಗಳೂರು ಭಾಗದ ಎಲ್ಲಾ ಜನಪ್ರತಿನಿಧಿಗಳು ಹಾಗೂ ಸಿಂಡಿಕೇಟ್ ಸದಸ್ಯರು ಸೇರಿದಂತೆ ನಿಯೋಗ ತೆರಳಿ ಸನ್ಮಾನ್ಯ ಮುಖ್ಯಮಂತ್ರಿಗಳನ್ನು ಭೇಟಿಯಾಗಿ ಚರ್ಚಿಸಿ ಸರ್ಕಾರದ ಸಹಾಯ ಕೋರಬಹುದು ಎಂದರು. ಇದಕ್ಕೆ ಎಲ್ಲಾ ಸದಸ್ಯರು ಸಹಮತ ವ್ಯಕ್ತಪಡಿಸಿದರು.

**2024–ಸಿಂ–4.07(6):** ಶ್ರೀ ಕೆ.ಪಿ. ಶ್ರೀಪಾಲ್ ರವರು ಮಾತನಾಡಿ ಸಹ್ಯಾದ್ರಿ ಕಾಲೇಜಿನ ಆವರಣದಲ್ಲಿ ಸೈನ್ಸ್ ಅಕಾಡೆಮಿ ಸ್ಥಾಪನೆ ಮಾಡಲು ಏಳು ಎಕರೆ ಜಾಗ ನೀಡಲಾಗಿದೆ. ಇದಕ್ಕೆ ವಿಶ್ವವಿದ್ಯಾಲಯದಿಂದ ಅನುಮೋದನೆ ನೀಡಿ, ಸರ್ಕಾರದಿಂಧ ಆದೇಶ ಕೂಡ ಆಗಿದೆ. ಈ ರೀತಿ ಜಾಗ ನೀಡುತ್ತಾ ಹೋದಲ್ಲಿ ಸಹ್ಯಾದ್ರಿ ಕಾಲೇಜಿನ ಶೈಕ್ಷಣಿಕ ಮತ್ತು ಇತರೆ ಚಟುವಟಿಕೆಗಳಿಗೆ ಜಾಗವೇ ಇಲ್ಲದಂತಾಗುತ್ತದೆ. ಶಿವಮೊಗ್ಗದಲ್ಲಿ ಭೂಮಿಯ ದರ ಬಹಳ ಹೆಚ್ಚಾಗಿದ್ದು, ಅರ್ಧ ಎಕರೆ ಪಡೆಯುವುದು ಕೂಡ ತುಂಬಾ ಕಷ್ಟ ಇದೆ. ಅಭಿವೃದ್ಧಿ ಒಳ್ಳೆಯದು. ಆದರೆ, ಎಲ್ಲದಕ್ಕೂ ಸಹ್ಯಾದ್ರಿ ಕಾಲೇಜಿನ ಜಾಗವೇ ಏಕೆ ಬೇಕು? ಶಿವಮೊಗ್ಗದಲ್ಲಿ ಬಹಳಷ್ಟು ಖಾಲಿ ಜಾಗ ಇದ್ದು, ಬಳಸಿಕೊಳ್ಳಬಹುದು. ಸೈನ್ಸ್ ಅಕಾಡೆಮಿಯಿಂದ ವಿಶ್ವವಿದ್ಯಾಲಯಕ್ಕೆ ಯಾವುದೇ ಉಪಯೋಗವಿಲ್ಲ. ಆದುದರಿಂದ, ವಿಶ್ವವಿದ್ಯಾಲಯದಿಂದ ಅನುಮತಿ ನಿರಾಕರಿಸಿ, ಈ ಬಗ್ಗೆ ತೀರ್ಮಾನವನ್ನು ಮರುಪರಿಶೀಲಿಸುವಂತೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಬಹುದು ಎಂದರು.

ಮಾನ್ಯ ಕುಲಪತಿಯವರು ಮಾತನಾಡಿ, ಸೈನ್ಸ್ ಅಕಾಡೆಮಿ ಆರಂಭವಾದಲ್ಲಿ ಈ ಭಾಗದ ವಿದ್ಯಾರ್ಥಿಗಳಿಗೆ ಹಾಗೂ ಸಾರ್ವಜನಿಕರಿಗೆ ಉಪಯೋಗವಾಗುತ್ತದೆ ಆದರೆ, ಉದ್ದೇಶ ಸರಿಯಾಗಿರಬೇಕು ಎಂದರು. ಶ್ರೀ ಕೆ.ಪಿ. ಶ್ರೀಪಾಲ್‌ರವರು ಮುಂದುವರೆದು ಮಾತನಾಡಿ ಸಹ್ಯಾದ್ರಿ ಕಾಲೇಜಿನ ಭೂಮಿ ನೀಡದಿರುವ ಬಗ್ಗೆ ಮುಂದಿನ ಸಿಂಡಿಕೇಟ್ ಸಭೆಯಲ್ಲಿ ವಿವರವಾಗಿ ಚರ್ಚಿಸಿ ಮರು ನಿರ್ಣಯ ಕೈಗೊಂಡು ಸರ್ಕಾರಕ್ಕೆ ವರದಿ ನೀಡಬಹುದು ಎಂದರು.

**2024–ಸಿಂ–4.07(7):** ಶ್ರೀ ಸಣ್ಣಹನುಮಪ್ಪರವರು ಮಾತನಾಡಿ, ಶಿವಮೊಗ್ಗದಿಂದ ಶಂಕರಘಟ್ಟದವರೆಗಿನ ರಸ್ತೆ ಕೆಲವು ಸ್ಥಳಗಳಲ್ಲಿ ಬಹಳಷ್ಟು ಹಾಳಾಗಿದ್ದು, ಮುಂಬರುವ ಘಟಿಕೋತ್ಸವದ ಹಿನ್ನೆಲೆಯಲ್ಲಿ ದುರಸ್ತಿಪಡಿಸುವಂತೆ ಲೋಕೋಪಯೋಗಿ ಇಲಾಖೆಗೆ ಪತ್ರ ಬರೆಯುವಂತೆ ಕೋರಿದರು.

ಈ ಬಗ್ಗೆ ಕ್ರಮ ಕೈಗೊಳ್ಳುವುದಾಗಿ ಕುಲಸಚಿವರು ಸಭೆಗೆ ತಿಳಿಸಿದರು.

ಅಂತಿಮವಾಗಿ ಸಭೆಗೆ ಆಗಮಿಸಿ ಸೂಕ್ತ ಸಲಹೆ, ಸಹಕಾರ ನೀಡಿದ ಎಲ್ಲಾ ಸದಸ್ಯರುಗಳಿಗೆ ಕುಲಸಚಿವರು ಹೃತ್ಪೂರ್ವಕವಾಗಿ ವಂದಿಸಿದ ನಂತರ ಸಭೆಯ ಕಲಾಪಗಳು ಮುಕ್ತಾಯವಾದವು.

31/10/24

ಕುಲಸಚಿವರು

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ

1/X/20

ಸಹಿ/-
ಕುಲಪತಿಗಳು